ವಿಷಯ: ದಕ್ಷಿಣ ಕನ್ನಡ ಜಿಲ್ಲಾ ಕ್ಯೊಲಾದ ಜಾನುವಾರು ತಳಿ ಸಂವರ್ದನ ಕೇಂದ್ರದಲ್ಲಿ ಸಂಭವಿಸಿದ ಅಗ್ನಿ ದುರಂತ.

ಶ್ರೀ.ಡಿ.ವಿ. ಸದಾನಂದ ಗೌಡ (ಪುತ್ತೂರು) ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದಕ್ಷಿಣ. ಕನ್ನಡಾ ಜಿಲ್ಲಾ. ಪುತ್ತೂರು ತಾಲ್ಲೂಕಿನ ಕ್ಯೊಲಾ ಜಾನುವಾರು ತಳಿ ಸಂವರ್ಧನಾ ಕೇಂದ್ರ ಅಗ್ನಿ ದುರ್ಘಟನೆಯಲ್ಲಿ ಸುಮಾರು ಆರು ಲಕ್ಷಕ್ಕೂ ಮಿಕ್ಕ ಗಿಡಗಳು ಹಾಗೂ ಒಣ ಮೇವುಗಳ ಸುಟ್ಟು ಹೋಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ. ಬಿ.ಎನ್. ಬಚ್ಚೇಗೌಡ
(ಪಶು ಸಂಗೋಪನಾ ರಾಜ್ಯ ಸಚಿವರು).

ಅ) ಬಂದಿದೆ.

ಆ) ಈ ವಿಚಾರದಲ್ಲಿ ಸಂಬಂಧಿತವಾದ ಅಧಿಕಾರಿ ; ನೌಕರರ ಮೇಲೆ ಜವಾಬ್ದಾರಿ ನಿಗಧಿಪಡಿಸಿ ಶಿಸ್ತುಕ್ರಮ ಜರುಗಿಸುವ ಸಲುವಾಗಿ ತನಿಖೆ ನಡೆಸಲಾಗುತ್ತಿದೆ.

ಇನ್ನು ಮುಂದೆ ಒಣ ಹುಲ್ಲನ್ನು ಶೀಘ್ರವಾಗಿ ಕತ್ತರಿಸಲು ಸೂಚನೆ ನೀಡಲಾಗಿದೆ.

ವಿಷಯ : ದೆಹಲಿಯಲ್ಲಿ ರಾಜ್ಯದ ಸ್ತಬ್ಧ ಚಿತ್ರಗಳನ್ನು ಗಣರಾಜ್ಯೋತ್ಸವ ದಿನದಂದು ಪ್ರದರ್ಶಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ: 146(56)

ಶ್ರೀ. ಆರ್. ಕೃಷ್ಣಪ್ಪ(ಜಯಮಹಲ್)

ಮಾನ್ಯ, ಕಾನೂನು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದೆಹಲಿಯಲ್ಲಿ ಗಣರಾಜ್ಯೋತ್ಸವ ದಿನದ ಪೆರೇಡಿನಲ್ಲಿ ರಾಜ್ಯದ ಸ್ಥಬ್ಧ ಚಿತ್ರಗಳು ಕಳೆದ 3 ವರ್ಷಗಳಿಂದ ಪ್ರದರ್ಶಿತಗೊಳ್ಳುವುದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಇ) ಮುಂದಿನ ವರ್ಷದ ಗಣರಾಜ್ಯೋತ್ಸವದಲ್ಲಿ ಸ್ಥಬ್ಧ ಚಿತ್ರಗಳನ್ನು ಪ್ರದರ್ಶಿಸಲು ಸರ್ಕಾರದವರು ಕ್ರಮಕೈಗೊಳ್ಳುವರೇ?

ಶ್ರೀ. ಎಂ.ಸಿ. ನಾಣಯ್ಯ
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು.

ಅ) ಹೌದು.

ಆ) ರಕ್ಷಣ ಮಂತ್ರಾಲಯದ ಸೂಚನೆಯಂತೆ ರಾಜ್ಯದ ಇತಿಹಾಸ ಚರಿತ್ರೆ, ಪರಿಸರ, ಕೈಗಾರಿಕೆ, ಕಲೆ ಕುರಿತಂತೆ. ಸ್ಥಬ್ಧ ಚಿತ್ರ ಸಿದ್ಧಪಡಿಸಿ ಆಯ್ಕೆ ಸಮಿತಿ ಮುಂದೆ ಸಾದರಪಡಿಸಲಾಗಿತ್ತು. ಅವರ ಸೂಚನೆಯಂತೆ ಕೀ ಮಾಡೆಲ್‌ಗಳನ್ನು ತಯಾರಿಸಲಾಗಿತ್ತು. ಆದರೂ ಅಂತಿಮ ಸುತ್ತಿನಲ್ಲಿ ರಾಜ್ಯದ ಸ್ಥಬ್ಧ ಚಿತ್ರಗಳಿಗೆ ಮೆರವಣಿಗೆಯಲ್ಲಿ ಭಾಗವಹಿಸಲು ಅವಕಾಶ ಸಿಗಲಿಲ್ಲ. ಆಯ್ಕೆ ಸಮಿತಿ ತೀರ್ಮಾನವೇ ಅಂತಿಮ. ಪ್ರತಿ ರಾಜ್ಯಕ್ಕೆ ಪ್ರತಿಬಾರಿ ಅವಕಾಶ ಕೊಡಬೇಕೆನ್ನುವ ಕಟ್ಟುಪಾಡು ಆಯ್ಕೆ ಸಮಿತಿಗೆ ಇರುವುದಿಲ್ಲ.

ಇ) ಅಗತ್ಯವಾಗಿ ಎಲ್ಲಾ ಕ್ರಮ ಕೈಗೊಳ್ಳಲಾಗುವುದು. ಈ ಪ್ರಕ್ರಿಯೆ ಮೇ, ಜೂನ್ ಮಾಹೆಯಲ್ಲಿ ಪ್ರಾರಂಭವಾಗುವುದು.

ವಿಷಯ:ತುಮಕೂರು ತಾಲ್ಲೂಕಿಗೆ ಮಿನಿ ಪವರ್‌ಸ್ಟೇಷನ್ ಮಂಜೂರು

ಚುಕ್ಕೆ ಗುರುತಿಲ್ಲದ ಪ್ರಶ್ನೆ: 147(372ಬಿ)
ಶ್ರೀ. ಎಸ್.ಶಿವಣ್ಣ (ತುಮಕೂರು)
ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ತುಮಕೂರು ತಾಲ್ಲೂಕು ಮಳೆಕೋಟೆ ಮಿನೀ ಪವರ್ ಸ್ಟೇಷನ್ ಅಂದಾಜು ವೆಚ್ಚವೆಷ್ಟು ಹಾಗೂ ಎಂದು ಪೂರ್ಣಗೊಳಿಸಲಾಗುವುದು.

ಶ್ರೀ. ಜೆ.ಎಚ್. ಪಟೇಲ್
ಉಪಮುಖ್ಯಮಂತ್ರಿಗಳು.

ಅ) 66:11 ಕೆವಿ ವಿದ್ಯುತ್ ಸಬ್ ಸ್ಟೇಷನ್ನಿನ ಅಂದಾಜು ಕಾರ್ಯವನ್ನು ಡಿಸೆಂಬರ್ 95ರ ಅಂತ್ಯದಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದೆ.